# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮಳವಳ್ಳಿ

## ಸಿ.ಸಿ ನಂ. 3673/2021

ಪ್ರಾಸಾ – 2 ಚಾಸಾ – 3

ಸಾಕ್ಷಿಯನ್ನು ದಿಃ 23.06.2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ರಾಜು |
| ತಂದೆಯ / ಗಂಡನ ಹೆಸರು | ಬೆಟ್ಟಯ್ಯ |
| ವಯಸ್ಸು | 47 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಬಾಳೆಹೊನ್ನಿಗ ಗ್ರಾಮ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ**

**1.** ಚಾಸಾ.1, 2 ಮತ್ತು 4 ನನಗೆ ಗೊತ್ತು. ಆರೋಪಿ ನನಗೆ ಗೊತ್ತು.

**2.** ದಿಃ.30.12.2020 ರಂದು ರಾತ್ರಿ 10.00 ರ ಸಮಯದಲ್ಲಿ ಆರೋಪಿಯು ಚಾಸಾ.2 ರವರ ಮನೆಯ ಮುಂದಿನ ರಸ್ತೆಯಲ್ಲಿ ಪಟಾಕಿಯನ್ನು ಹಚ್ಚಲು ಪ್ರಯತ್ನ ಪಟ್ಟಾಗ ಚಾಸಾ.2 ಅವನನ್ನು ತಡೆದಿದ್ದರಿಂದ ಅವರಿಗೆ ಲೋಫರ್ ಮುಂಡೆ ಸೂಳೆ ಮುಂಡೆ ಎಂದು ಅವ್ಯಾಚ್ಯ ಶಬ್ದಗಳಿಂದ ಬೈದು ಅವರನ್ನು ನೆಲಕ್ಕೆ ತಳ್ಳಿದರು. ಅಷ್ಟರಲ್ಲಿ ನಾನು ಮತ್ತು ಚಾಸಾ.2 ರವರ ಮಗಳಾದ ಶೃತಿರವರು ಅಂದರೆ ನನ್ನ ನಾದಿನಿ ಪಟಾಕಿಯನ್ನು ಚರಂಡಿಯಲ್ಲಿ ಎಸೆದಿರುತ್ತೇವೆ.

**3.** ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದು ಮಹಜರ್ ಆಗಿದ್ದು ಅದನ್ನು ಈಗಾಗಲೆ ನಿಪಿ.2 ಎಂದು ಗುರುತಿಸಲಾಗಿದೆ ಮತ್ತು ಸಾಕ್ಷಿಯ ಸಹಿಯನ್ನು ನಿಪಿ.2 (ಬಿ) ಎಂದು ಗುರುತಿಸಲಾಯಿತು. ದಿಃ 03.01.2021

ರಂದು ಚಾಸಾ.2 ರವರ ಮನೆಯ ಹತ್ತಿರ ಪೋಲೀಸರು ಮಹಜರು ಜರುಗಿಸಿದಾಗ ಸದರಿ ದಾಖಲೆಗೆ ಸಹಿ ಮಾಡಿರುತ್ತೇವೆ. ಆಗ ನಾನು ಮತ್ತು ಚಾಸಾ.4 ರವರು ಹಾಜರಿದ್ದೆವು. ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ-**

**4.** ಚಾಸಾ.1 ನನ್ನ ಭಾಮೈದ, ಚಾಸಾ.2 ನನ್ನ ಹೆಂಡತಿಯ ತಾಯಿ ಎಂದರೆ ಸರಿ. ಚಾಸಾ.4 ನನ್ನ ಅಕ್ಕನ ಸಂಬಂಧಿಕರು. ಚಂದ್ರುರವರು ನನ್ನ ಮಾವ. ಸದರಿಯವರು ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು ಎಂದರೆ ಸರಿ. ಅವರ ಎದುರಿಗೆ ಆರೋಪಿಯ ಚಿಕ್ಕಪ್ಪನಾದ ನಾಗರಾಜುರವರು ಚುನಾವಣೆಗೆ ಸ್ಪರ್ಧಿಸಿದ್ದರು ಎಂದರೆ ಸರಿ. ಚುನಾವಣೆಯಲ್ಲಿ ಪೈಪೋಟಿ ನಡೆದಿತ್ತು ಎಂದರೆ ಸರಿ. ಆರೋಪಿ ನನ್ನ ಸಂಬಂಧಿಕ ಎಂದರೆ ಸರಿ. ಆರೋಪಿಯ ಚಿಕ್ಕಪ್ಪ ನಾಗರಾಜುರವರ ಮನೆ ಚಾಸಾ.2 ರವರ ಮನೆಯ ಪಕ್ಕದಲ್ಲಿದೆ.

**5.** ಚುನಾವಣೆಯಲ್ಲಿ ಗೆದ್ದವರು ಸಂಭ್ರಮಾಚರಣೆ ಮಾಡುತ್ತಾರೆಂದರೆ ಸರಿ. ಚಾಸಾ.2 ರವರ ಮನೆಯ ಮುಂದೆ ಇದ್ದ ಕಾರು ಮತ್ತು ಬೈಕುಗಳ ಸಂಖ್ಯೆ ನನಗೆ ಗೊತ್ತಿಲ್ಲ. ಈ ವಿಚಾರವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ. ಆರೋಪಿಯ ಮನೆಯು ಘಟನಾ ಸ್ಥಳದಿಂದ 500 ಮೀಟರ್ ದೂರದಲ್ಲಿದೆ. ನಾನು ಚಾಸಾ.2 ರವರ ಮನೆಯಲ್ಲಿ ವಾಸವಾಗಿದ್ದೇನೆ. ಸಾಮಾನ್ಯವಾಗಿ ರಾತ್ರಿ 10.00 ರ ಸಮಯದಲ್ಲಿ ಹಳ್ಳಿಗಳ ಕಡೆಯಲ್ಲಿ ಎಲ್ಲರೂ ಮನೆಯಲ್ಲಿರುತ್ತಾರೆಂದರೆ ಸರಿ. ರಾತ್ರಿ 10.00 ಗಂಟೆಗೆ ಪಟಾಕಿ ಶಬ್ದ ಕೇಳಿರುತ್ತದೆ. ಸ್ಥಳದಲ್ಲಿ ಲಕ್ಷ್ಮಿ ಸರ ಪಟಾಕಿ ಇತ್ತು. ಪಟಾಕಿ ಹಚ್ಚಿದಾಗ ಸುಮಾರು 7 - 8 ಜನ ಇದ್ದರು. ಸದರಿಯರ ಹೆಸರು ಹೇಳಲು ಆಗುವುದಿಲ್ಲ. ಆರೋಪಿಯು ಪಟಾಕಿ ಹೊಡೆದಿಲ್ಲ ಎಂದರೆ ಸರಿಯಲ್ಲ.

**6.** ಚಂದ್ರುರವರು ಚುನಾವಣೆಯಲ್ಲಿ ಸೋತಿದ್ದರಿಂದ ಆರೋಪಿಯ ಮೇಲೆ ದ್ವೇಷ ಇಟ್ಟುಕೊಂಡು ಚಾಸಾ.1 ರವರು ಸುಳ್ಳು ದೂರು ಸಲ್ಲಿಸಿದ್ದಾರೆಂದರೆ ಸರಿಯಲ್ಲ. ಈ ವಿಚಾರಕ್ಕೆ ಸಂಬಂಧಿಸಿ ನಾನು ಎಂದೂ ಠಾಣೆಗೆ ಹೋಗಿಲ್ಲ. ಒಂದು ಹಾಳೆಯಷ್ಟು ಪೋಲೀಸರು ಮಹಜರು ಬರೆದಿದ್ದರು. ಅದನ್ನು ಚಾಸಾ.2 ರವರು ಹೇಳಿ ಬರೆಸಿರುತ್ತಾರೆ. ನಿಪಿ.2 ರ ಅಂಶಗಳು ನನಗೆ ಗೊತ್ತಿಲ್ಲ. ಪೋಲೀಸರು ನನಗೆ ನೋಟೀಸು ಕೊಟ್ಟಿಲ್ಲ. ಪಂಚನಾಮೆಗೆ ನಾನು ಹಾಗೂ ಗೋಪಾಲ್ ಸಹಿ ಮಾಡಿರುತ್ತೇವೆ. ನಮ್ಮನ್ನು ಹೊರತು ಪಡಿಸಿ ಬೇರೆಯವರು

ಯಾರು ಸಹಿ ಮಾಡಿದ್ದರೆಂದು ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿದ್ದಾರೆಂದರೆ ಸಾಕ್ಷಿಯು ಎಲ್ಲಿ ಬರೆದಿದ್ದಾರೆಂದು ಗೊತ್ತಿಲ್ಲ, ಆದರೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಚಾಸಾ.1 ರವರು ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ.2 ರವರ ಮನೆಯ ಮುಂದೆ ಪಟಾಕಿ ಹೊಡೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಘಟನೆ ನೋಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ

ಮಳವಳ್ಳಿ